# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಮೆ: ಗೋದಾವರಿ ಬಯೋರಿಫೈನರೀಸ್(ಲಿ), ಸಮೀರವಾಡಿ, ಮುಧೋಳ ತಾಲ್ಲೂಕು, ಬಾಗಲಕೋಟೆ ಇವರಿಗೆ ಘಟಪ್ರಭಾ ನದಿಯಿಂದ ನೀರನ್ನು ಎತ್ತಿ ಕೈಗಾರಿಕೆಗೆ ಬಳಕೆ ಮಾಡಲು ನೀಡಿರುವ ಪರವಾನಗಿಯನ್ನು ನವೀಕರಿಸುವ ಕುರಿತು.

- - -

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ಜಸಂಇ 24 ಎನ್ಐಎನ್ 2013, ದಿನಾಂಕ:11.09.2014.
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ ಇವರ ಪತ್ರ ಸಂಖ್ಯೆ:ಕೆಎನ್ಎನ್/ತಾಂತ್ರಿಕ/ಟಿಜಿಸಿ/1224/2017-18 ದಿನಾಂಕ:22.03.2018.
3. ಮುಖ್ಯ ಇಂಜಿನಿಯರ್, ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆ ರವರ ಪತ್ರ ಸಂಖ್ಯೆ:ಜಸಅ/ಯೋಮತ/ತಾಸ-4/ಸಇ-6/ಕೈ.ನಿ./2017-18/666 ದಿನಾಂಕ:12.07.2018.
4. ದಿನಾಂಕ:30.10.2018 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಕೈಗಾರಿಕೆಗಳಿಗೆ ನೀರಿನ ಹಂಚಿಕೆ ಕುರಿತು ಪರಿಶೀಲಿಸಲು ರಚಿಸಲಾಗಿರುವ ಸಮಿತಿಯ 26ನೇ ಸಭೆಯ ನಡವಳಿ.

ಪ್ರಸ್ತಾವನೆ:

ಮೆ: ಗೋದಾವರಿ ಬಯೋರಿಫೈನರೀಸ್(ಲಿ), ಸಮೀರವಾಡಿ, ಮುಧೋಳ ತಾಲ್ಲೂಕು, ಬಾಗಲಕೋಟೆ ಇವರಿಗೆ ಕೈಗಾರಿಕಾ ಉಪಯೋಗಕ್ಕಾಗಿ ಘಟಪ್ರಭಾ ನದಿಯಿಂದ ವಾರ್ಷಿಕ 97.70 ಎಂ.ಸಿ.ಎಫ್.ಟಿ. ಪ್ರಮಾಣದ ನೀರನ್ನು ಎತ್ತಿ ಬಳಸಲು ಮೇಲೆ ಓದಲಾದ (1)ರ ಆದೇಶದಲ್ಲಿ ದಿನಾಂಕ:01.02.2013 ರಿಂದ 31.01.2018ರವರೆಗೆ ಪರವಾನಗಿಯನ್ನು ನವೀಕರಿಸಲಾಗಿರುತ್ತದೆ.

ಮೇಲೆ ಓದಲಾದ (2)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ ಇವರು ಮೆ: ಗೋದಾವರಿ ಬಯೋರಿಫೈನರೀಸ್(ಲಿ), ಸಮೀರವಾಡಿ, ಮುಧೋಳ ರವರ ಮನವಿಯಂತೆ ಘಟಪ್ರಭಾ ನದಿಯಿಂದ ವಾರ್ಷಿಕ 97.70 ಎಂಸಿಎಫ್‌ಟಿ ನೀರನ್ನೆತ್ತಲು ಮುಂದಿನ ಅವಧಿಗಾಗಿ ಅಂದರೆ ದಿ:01.02.2018 ರಿಂದ 31.01.2023ರವರೆಗೆ 5 ವರ್ಷಗಳ ಅವಧಿಗೆ ಒಪ್ಪಂದದ ಪತ್ರವನ್ನು ನವೀಕರಿಸಬಹುದಾಗಿದೆ ಎಂದು ಮುಖ್ಯ ಇಂಜಿನಿಯರ್, ನೀರಾವರಿ(ಉತ್ತರ) ವಲಯ, ಬೆಳಗಾಂ ಇವರು ಶಿಫಾರಸ್ಸಿರುವ ಹಿನ್ನಲೆಯಲ್ಲಿ, ಸದರಿ ಕೈಗಾರಿಕೆಗೆ ದಿ:01.02.2018 ರಿಂದ ಮುಂದಿನ ಐದು ವರ್ಷಗಳ ಅವಧಿಗೆ ಪರವಾನಗಿ ನವೀಕರಿಸುವ ಪ್ರಸ್ತಾವನೆಗೆ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

ಮೇಲೆ ಓದಲಾದ (3)ರ ಮುಖ್ಯ ಇಂಜಿನಿಯರ್, ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆ ರವರ ವರದಿಯಲ್ಲಿ, ಮೆ: ಗೋದಾವರಿ ಬಯೋರಿಫೈನರೀಸ್(ಲಿ), ಸಮೀರವಾಡಿ, ಮುಧೋಳ ಇವರಿಗೆ ಘಟಪ್ರಭಾ ನದಿಯಿಂದ ವಾರ್ಷಿಕ 97.70 ಎಂಸಿಎಫ್‌ಟಿ ನೀರನ್ನೆತ್ತಲು 5 ವರ್ಷಗಳ (ದಿ:01.02.2018 ರಿಂದ 31.01.2023) ಅವಧಿಗೆ ಪರವಾನಗಿಯನ್ನು ನವೀಕರಿಸುವಾಗ ನಿಗಮದವರಿಂದ ಸದರಿ ಕಂಪನಿಯವರ ಜೊತೆ ಒಪ್ಪಂದ ಮಾಡಿಕೊಳ್ಳುವಾಗ Water current meter, Water meter calibration ಹಾಗೂ ಸಂಬಂಧಿಸಿದ Register Log ಬಗ್ಗೆ ಕಟ್ಟುನಿಟ್ಟಾದ ಅಂಶದ ಬಗ್ಗೆ ಹಾಗೂ ಮಳೆಗಾಲದ ಅವಧಿಯಲ್ಲಿ ವಾರ್ಷಿಕವಾಗಿ ಕಂಪನಿಗೆ ಅವಶ್ಯವಿದ್ದ ನೀರನ್ನು ಕಂಪನಿಯರವರು ಸ್ವಂತ ಜಾಗದಲ್ಲಿ ನೀರಿನ ಸಂಗ್ರಹಣೆಯ ವ್ಯವಸ್ಥೆ ಮಾಡಿಕೊಳ್ಳಬೇಕೆಂಬುದರ ಷರತ್ತನ್ನು ಒಪ್ಪಂದ ಪತ್ರದಲ್ಲಿ ಸೇರಿಸುವಂತೆ ತಿಳಿಸಬಹುದೆಂಬ ಅಭಿಪ್ರಾಯ ನೀಡಿರುತ್ತಾರೆ.

..2

ಮೇಲೆ ಓದಲಾದ (4)ರ ನಡವಳಿಯಲ್ಲಿ, ಕೈಗಾರಿಕೆಗಳಿಗೆ ನೀರಿನ ಹಂಚಿಕೆ ಕುರಿತು ಪರಿಶೀಲಿಸಲು ರಚಿಸಲಾಗಿರುವ ಸಮಿತಿಯ ದಿನಾಂಕ:30.10.2018 ರಂದು ನಡೆದ ಸಭೆಯಲ್ಲಿ, ಮೆ: ಗೋದಾವರಿ ಬಯೋರಿಫೈನರೀಸ್(ಲಿ), ಸಮೀರವಾಡಿ, ಮುಧೋಳ ತಾಲ್ಲೂಕು, ಬಾಗಲಕೋಟೆ ಇವರಿಗೆ ಘಟಪ್ರಭಾ ನದಿಯಿಂದ ವಾರ್ಷಿಕ 97.70 ಎಂಸಿಎಫ್‌ಟಿ ಅವಶ್ಯವಿರುವ ನೀರನ್ನು ಬಳಸಲು ಸದರಿ ಕಂಪನಿಯವರ ಜೊತೆ ಒಪ್ಪಂದ ಮಾಡಿಕೊಳ್ಳುವಾಗ Water current meter, Water meter calibration ಹಾಗೂ ಸಂಬಂಧಿಸಿದ Log Registerನ ಅಂಶದ ಬಗ್ಗೆ ಹಾಗೂ ಮಳೆಗಾಲದ ಅವಧಿಯಲ್ಲಿ ಕಂಪನಿಯರವರು ಘಟಪ್ರಭಾ ನದಿಯಿಂದ ನೀರನ್ನು ಎತ್ತಿ ತಮ್ಮದೇ ಆದ ಸ್ವಂತ ಸ್ಥಳದಲ್ಲಿ ನೀರನ್ನು ಸಂಗ್ರಹಿಸಿ ಮಳೆಗಾಲವಲ್ಲದ (Non Monsoon requirement) ಅವಧಿಯಲ್ಲಿ ಉಪಯೋಗಿಸಿಕೊಳ್ಳುವ ನಿಬಂಧನೆ ಹಾಗೂ ಜಲ ಸಂಪನ್ಮೂಲ ಇಲಾಖೆಯಿಂದ ವಿಧಿಸಲಾಗುವ ಷರತ್ತುಗಳಿಗೊಳಪಟ್ಟು 5 ವರ್ಷಗಳ ಅವಧಿಗೆ ಅಂದರೆ ದಿನಾಂಕ:01.02.2018 ರಿಂದ 31.01.2023ರವರೆಗೆ ನೀರಿನ ಬಳಕೆಯ ಪರವಾನಗಿಯನ್ನು ನವೀಕರಿಸಲು ಶಿಫಾರಸ್ಸು ಮಾಡಿರುತ್ತದೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದ್ದು, ಈ ಕೆಳಗಿನಂತೆ ಆದೇಶವನ್ನು ಹೊರಡಿಸಲಾಗಿದೆ.

**ಸರ್ಕಾರಿ ಆದೇಶ ಸಂಖ್ಯೆ: ಜಸಂಇ 17 ಎನ್‌ಐಎನ್ 2018, ಬೆಂಗಳೂರು, ದಿನಾಂಕ:20.07.2019**

ಮೆ: ಗೋದಾವರಿ ಬಯೋರಿಫೈನರೀಸ್(ಲಿ), ಸಮೀರವಾಡಿ, ಮುಧೋಳ ತಾಲ್ಲೂಕು, ಬಾಗಲಕೋಟೆ ಇವರಿಗೆ ಘಟಪ್ರಭಾ ನದಿಯಿಂದ ವಾರ್ಷಿಕ 97.70 ಎಂಸಿಎಫ್‌ಟಿ ಅವಶ್ಯವಿರುವ ನೀರನ್ನು ಬಳಸಲು ಒಪ್ಪಂದ ಮಾಡಿಕೊಳ್ಳುವಾಗ Water current meter, Water meter calibration ಹಾಗೂ ಸಂಬಂಧಿಸಿದ Log Registerನ ಅಂಶದ ಬಗ್ಗೆ ಹಾಗೂ ಮಳೆಗಾಲದ ಅವಧಿಯಲ್ಲಿ ಕಂಪನಿಯವರು ಘಟಪ್ರಭಾ ನದಿಯಿಂದ ನೀರನ್ನು ಎತ್ತಿ ತಮ್ಮದೇ ಆದ ಸ್ವಂತ ಸ್ಥಳದಲ್ಲಿ ನೀರನ್ನು ಸಂಗ್ರಹಿಸಿ ಮಳೆಗಾಲವಲ್ಲದ (Non Monsoon requirement) ಅವಧಿಯಲ್ಲಿ ಉಪಯೋಗಿಸಿಕೊಳ್ಳುವ ನಿಬಂಧನೆ ಹಾಗೂ ಅನುಬಂಧದಲ್ಲಿ ನೀಡಿರುವ ಷರತ್ತುಗಳನ್ನು ವಿಧಿಸಿ, ಪರವಾನಗಿ ನವೀಕರಣದ ಅನುಮತಿಯನ್ನು ದಿನಾಂಕ:01.02.2018 ರಿಂದ 31.01.2023ರವರೆಗೆ 5 ವರ್ಷಗಳ ಅವಧಿಗೆ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

20/7/2019
(ಎಸ್.ಎನ್.ಕೇಶವಪ್ರಕಾಶ್)
ಸರ್ಕಾರದ ಅಧೀನ ಕಾರ್ಯದರ್ಶಿ(ತಾಂತ್ರಿಕ-4),
ಜಲ ಸಂಪನ್ಮೂಲ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ (ಲೆಕ್ಕ ಪತ್ರ / ಲೆಕ್ಕಪರಿಶೋಧನೆ), ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು.
3. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಕಾಫಿ ಬೋರ್ಡ್ ಕಟ್ಟಡ, ಬೆಂಗಳೂರು.
4. ಮುಖ್ಯ ಇಂಜಿನಿಯರ್, ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಆನಂದರಾವ್ ವೃತ್ತ, ಬೆಂಗಳೂರು-9.
5. ಮುಖ್ಯ ಇಂಜಿನಿಯರ್, ನೀರಾವರಿ (ಉತ್ತರ) ವಲಯ, ಬೆಳಗಾಂ.
6. ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ (ಆರ್ಥಿಕ ಕೋಶ), ವಿಧಾನಸೌಧ , ಬೆಂಗಳೂರು.
7. ಮುಖ್ಯ ಇಂಜಿನಿಯರ್, ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಜಿಯೋಮೆಟಿಕ್ಸ್ ಕೇಂದ್ರ, ಆನಂದ್‌ರಾವ್ ವೃತ್ತ, ಬೆಂಗಳೂರು.

8. ಮಾನ್ಯ ಜಲ ಸಂಪನ್ಮೂಲ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
9. ಮೆ: ಗೋದಾವರಿ ಬಯೋರಿಫೈನರೀಸ್(ಲಿ), ಸಮೀರವಾಡಿ, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.
10. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ಜಲ ಸಂಪನ್ಮೂಲ ಇಲಾಖೆ, ವಿಕಾಸ ಸೌಧ, ಬೆಂಗಳೂರು-1.
11. ಸರ್ಕಾರದ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ಜಲ ಸಂಪನ್ಮೂಲ ಇಲಾಖೆ, ವಿಕಾಸ ಸೌಧ, ಬೆಂಗಳೂರು-1.
12. ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ಜಲ ಸಂಪನ್ಮೂಲ ಇಲಾಖೆ, ವಿಕಾಸ ಸೌಧ, ಬೆಂಗಳೂರು-1.
13. ಜಲ ಸಂಪನ್ಮೂಲ ಇಲಾಖೆಯ ಎಲ್ಲಾ ಉಪ ಕಾರ್ಯದರ್ಶಿಗಳು/ಸರ್ಕಾರದ ಅಧೀನ ಕಾರ್ಯದರ್ಶಿಗಳು.
14. ಶಾಖಾ ರಕ್ಷಾ ಕಡತ/ಹೆಚ್ಚಿನ ಪ್ರತಿ.